**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

ಖಾಸಗಿ ದೂರು ಸಂಖ್ಯೆ 101/2021

ಫ್ರಾ.ಸಾ– 1

| | | |
|---|---|---|
| ಹೆಸರು | : | ನಾಗಮ್ಮ |
| ತಂದೆಯ ಹೆಸರು | : | ಲೇಟ್ ಬಸವಯ್ಯ |
| ವಯಸ್ಸು | : | 42 |
| ವೃತ್ತಿ | : | ಕೂಲಿ |
| ವಾಸ | : | ಸುಜ್ಜಲೂರು ಗ್ರಾಮ. ತಿ.ನರಸೀಪುರ ತಾಲೂಕು. |

**ದಿನಾಂಕ 21.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ದಂಡ ಪ್ರಕ್ರಿಯೆ ಸಂಹಿತೆ ಕಲಂ 200ರಡಿಯಲ್ಲಿ ದೂರುದಾರರ ಪ್ರಮಾಣೀಕೃತ ಹೇಳಿಕೆ.**

2ನೇ ದೂರುದಾರರು ನನ್ನ ಅಕ್ಕ.

ದಿನಾಂಕ 19.08.2021ರಂದು ನಮ್ಮ ಗ್ರಾಮದಲ್ಲಿರುವ ನಮ್ಮ ಕಲ್ನಾರ್ ಶೀಟಿನ ಮನೆಯನ್ನು ಆರೋಪಿತರು ಜೆ.ಸಿ.ಬಿ ಇಂದ ಕೆಡವಿದರು. ಅದರಿಂದ ನಮ್ಮ ಮನೆಯಲ್ಲಿದ್ದ ಸಾಮಾಗ್ರಿಗಳೆಲ್ಲವೂ ಹಾಳಾದವು. 2ರಿಂದ 4ನೇ ಆರೋಪಿತರು ಸದರಿ ಮನೆಯನ್ನು ಕೆಡವುವಂತೆ ನನಗೆ ಆಗಾಗ ಬೈದು ತೊಂದರೆ ಕೊಡುತ್ತಿದ್ದರು. ನಾನು 1ನೇ ಆರೋಪಿತನ ಬಳಿ ಹೋಗಿ ಸದರಿ ಮನೆಯು ನಮ್ಮ ಪಿತ್ರಾರ್ಜಿತ ಜಾಗದಲ್ಲಿದೆ ಎಂದು ಹೇಳಿದರು ಕೂಡ ಅವರು ನನ್ನ ಮಾತನ್ನು ಕೇಳಲಿಲ್ಲ.

6 ಮತ್ತು 11ನೇ ಆರೋಪಿತರು ತಮ್ಮ ತಮ್ಮ ಕಾಲುಗಳಿಂದ ನನಗೆ ಒದೆಯಲು ಬಂದರು. ನನ್ನ ಮನೆಯನ್ನು ರಕ್ಷಿಸಲು ತಿ.ನರಸೀಪುರದ ಸಿವಿಲ್ ನ್ಯಾಯಾಧೀಶರ

ನ್ಯಾಯಾಲಯದಲ್ಲಿ ದಾವಾ ಸಲ್ಲಿಸಿ ಪಡೆದುಕೊಂಡಿದ್ದ ಮಧ್ಯಂತರ ಆದೇಶದ ಪ್ರತಿಯನ್ನು 1ನೇ ಆರೋಪಿತನಿಗೆ ನಾನು ನೀಡಿದ್ದು, ಅವರು ಅದನ್ನು ಹರಿದುಹಾಕಿರುತ್ತಾರೆ.

ನಂತರ ನಾನು ಆರೋಪಿತರ ವಿರುದ್ಧ ಕ್ರಮ ಕೈಗೊಳ್ಳಲು ಮೈಸೂರಿನ ಪೊಲೀಸ್ ವರಿಷ್ಠಾಧಿಕಾರಿಗೆ ಮತ್ತು ತಿ.ನರಸೀಪುರದ ತಹಶೀಲ್ದಾರ್ ರವರಿಗೆ ದೂರನ್ನು ನೀಡಿದ್ದೆ. ಅದ್ಯಾಗೂ ಆರೋಪಿತರ ವಿರುದ್ಧ ಅವರು ಯಾವುದೇ ಕ್ರಮ ಕೈಗೊಂಡಿಲ್ಲ. ಹಾಗಾಗಿ ನಾನು ನ್ಯಾಯಾಲಯಕ್ಕೆ ಬಂದಿದ್ದೇನೆ. ಆದುದ್ದರಿಂದ ಅವರ ವಿರುದ್ಧ ಕಾನೂನು ಕ್ರಮಕ್ಕಾಗಿ ಪ್ರಾರ್ಥಿಸುತ್ತೇನೆ.

**ಮರು ವಿಚಾರಣೆ ಇಲ್ಲ.**
**(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)**
**ಓ ಹೇ ಕೇ ಸರಿ ಇದೆ**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ., ತಿ.ನರಸೀಪುರ**

**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ತಿ. ನರಸೀಪುರ**

ಖಾಸಗಿ ದೂರು ಸಂಖ್ಯೆ 101/2021

ಫ್ರಾ.ಸಾ–2

| | | |
|---|---|---|
| ಹೆಸರು | : | ಮಾದೇಶ್ |
| ತಂದೆಯ ಹೆಸರು | : | ಲೇಟ್ ಮಾದಯ್ಯ |
| ವಯಸ್ಸು | : | 30 |
| ವೃತ್ತಿ | : | ಕೂಲಿ |
| ವಾಸ | : | ಸುಜ್ಜಲೂರು ಗ್ರಾಮ. ತಿ.ನರಸೀಪುರ ತಾಲೂಕು. |

**ದಿನಾಂಕ 21.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ದಂಡ ಪ್ರಕ್ರಿಯೆ ಸಂಹಿತೆ ಕಲಂ 200ರಡಿಯಲ್ಲಿ ದೂರುದಾರರ ಪ್ರಮಾಣೀಕೃತ ಹೇಳಿಕೆ.**

ದೂರುದಾರರ ಪರಿಚಯವಿದೆ. ಅವರ ಜಾಗದಲ್ಲಿ ಕಲ್ನಾರ್ ಶೀಟಿನ ಮನೆಯನ್ನು ಹೊಂದಿದ್ದು, ಅದರ ರಕ್ಷಣೆಗಾಗಿ ಅವರು ತಿ.ನರಸೀಪುರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಆದೇಶವನ್ನು ತಂದಿದ್ದರು.

ದಿನಾಂಕ 19.08.2021ರಂದು ನಮ್ಮ ಗ್ರಾಮದಲ್ಲಿರುವ ದೂರುದಾರರ ಕಲ್ನಾರ್ ಶೀಟಿನ ಮನೆಯನ್ನು ಆರೋಪಿತರು ಜೆ.ಸಿ.ಬಿ ಇಂದ ಕೆಡವಿದರು. ಅದರಿಂದ ಅವರ ಮನೆಯಲ್ಲಿದ್ದ ಸಾಮಾಗ್ರಿಗಳೆಲ್ಲವೂ ಹಾಳಾದವು. ಅದರಿಂದ ಅವರಿಗೆ ಸುಮಾರು ರೂ.50000/–ಗಳಷ್ಟು ನಷ್ಟಯುಂಟಾಯಿತು.

6 ಮತ್ತು 11ನೇ ಆರೋಪಿತರು ತಮ್ಮ ತಮ್ಮ ಕಾಲುಗಳಿಂದ ದೂರುದಾರರಿಗೆ ಒದೆಯುತ್ತಿದ್ದರು. ನಂತರ ನಾನು ಮತ್ತು ಸಿದ್ದಪ್ಪರವರ ಮಗ ನಾಗರಾಜು ರವರು ಸೇರಿ

ಗಲಾಟೆಯನ್ನು ಬಿಡಿಸಿದೆವು. ದೂರುದಾರರು ಪೊಲೀಸ್ ಠಾಣೆಗೆ ದೂರು ನೀಡಲು ಹೋಗಿದ್ದು, ಪೊಲೀಸರು ದೂರನ್ನು ಸ್ವೀಕರಿಸಲಿಲ್ಲ.

**ಮರು ವಿಚಾರಣೆ ಇಲ್ಲ.**

**(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)**

**ಓ ಹೇ ಕೇ ಸರಿ ಇದೆ**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದ., ತಿ.ನರಸೀಪುರ**

**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ತಿ. ನರಸೀಪುರ**

ಖಾಸಗಿ ದೂರು ಸಂಖ್ಯೆ 101/2021

ಪ್ರಾ.ಸಾ–3

| | | |
|---|---|---|
| ಹೆಸರು | : | ನಾಗರಾಜು |
| ತಂದೆಯ ಹೆಸರು | : | ಸಿದ್ದಪ್ಪ |
| ವಯಸ್ಸು | : | 40 |
| ವೃತ್ತಿ | : | ವ್ಯವಸಾಯ |
| ವಾಸ | : | ಸುಜ್ಜಲೂರು ಗ್ರಾಮ. ತಿ.ನರಸೀಪುರ ತಾಲೂಕು. |

**ದಿನಾಂಕ 21.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ದಂಡ ಪ್ರಕ್ರಿಯೆ ಸಂಹಿತೆ ಕಲಂ 200ರಡಿಯಲ್ಲಿ ದೂರುದಾರರ ಪ್ರಮಾಣೀಕೃತ ಹೇಳಿಕೆ.**

ದೂರುದಾರರ ಪರಿಯವಿದೆ. ಅವರು ರಸ್ತೆಯಲ್ಲಿ ಕಲ್ನಾರ್ ಶೀಟಿನ ಮನೆಯನ್ನು ನಿರ್ಮಿಸಿದ್ದಾರೆಂದು, ಅದನ್ನು ಕೆಡವಲು 1 ರಿಂದ 3, 6 ಮತ್ತು 11ನೇ ಆರೋಪಿತರು ಹಾಗೂ ಪೊಲೀಸರು ಬಂದಿದ್ದರು. ಆ ಮನೆಯನ್ನು ಜೆ.ಸಿ.ಬಿ ಸಹಾಯದಿಂದ ಹೊಡೆಯಲಾಯಿತು. ಬೇರೆ ವಿಚಾರಗಳು ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ.**

**(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)**

**ಓ ಹೇ ಕೇ ಸರಿ ಇದೆ**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದ., ತಿ.ನರಸೀಪುರ**